ಶ್ರೀರಾಮಕೃಷ್ಣರು ನನ್ನನ್ನು ನೋಡಲು ಆಗಾಗ ನಾಟಕಮಂದಿರಕ್ಕೆ ಬರುತ್ತಿದ್ದರು. ಹಾಗೆ ಬರುವಾಗಲೆಲ್ಲ ದಕ್ಷಿಣೇಶ್ವರದಿಂದ ನನಗೆ ಸಿಹಿತಿಂಡಿ ತರುತ್ತಿದ್ದರು. ಅವನ್ನು ತಾವು ಮೊದಲು ರುಚಿ ನೋಡಿ, ಅನಂತರ ನನಗೆ ಕೊಡುತ್ತಿದ್ದರು. ತಕ್ಷಣವೇ ನನ್ನ ಮನಃಸ್ಥಿತಿ ಬದಲಾಗಿಬಿಡುತ್ತಿತ್ತು. ಸಣ್ಣ ಮಗುವಿನಂತೆ ಆಗಿಬಿಡುತ್ತಿದ್ದೆ. ತಂದೆತಾಯಿಗಳು ಪ್ರೀತಿಯಿಂದ ತಿನ್ನಿಸುತ್ತಿದ್ದಂತೆ ಅನ್ನಿಸುತ್ತಿತ್ತು.

ಒಂದು ದಿನ ನಾನು ದಕ್ಷಿಣೇಶ್ವರಕ್ಕೆ ಹೋದಾಗ ಶ್ರೀರಾಮಕೃಷ್ಣರ ಮಧ್ಯಾಹ್ನದ ಊಟ ಇನ್ನೇನು ಮುಗಿಯುವುದರಲ್ಲಿತ್ತು. ಊಟದ ಕೊನೆಯಲ್ಲಿ ತಿನ್ನುವ ಹಣ್ಣು, ಮಿಠಾಯಿಗಳನ್ನು ಅವರು ನನಗೆ ಕೊಟ್ಟರು. ನಾನು ಇನ್ನೇನು ತಿನ್ನುವಷ್ಟರಲ್ಲಿ, "ಇರು, ನಾನೇ ನಿನಗೆ ತಿನ್ನಿಸುತ್ತೇನೆ" ಎಂದು ಹೇಳುತ್ತ, ಸಿಹಿತಿಂಡಿಯನ್ನು ತಮ್ಮ ಬೆರಳುಗಳಿಂದ ನನ್ನ ಬಾಯೊಳಗೆ ಇಟ್ಟರು. ನಾನು ಹಸಿವೆಯ ಅವಸರದಿಂದ, ಮಗುವಿನಂತೆ ಪರಿವೆಯಿಲ್ಲದೆ ತಿಂದೆ. ನಾನು ವಯಸ್ಕನೆಂಬುದು ನನಗೆ ಆ ಕ್ಷಣಕ್ಕೆ ಮರೆತೇಹೋಯಿತು. ನಾನು ತಾಯಿಯ ಮಗುವಾಗಿದ್ದೆ; ತಾಯಿ ನನಗೆ ತಿನ್ನಿಸುತ್ತಿದ್ದಳು. ಆದರೆ, ಅನೇಕ ಅಪವಿತ್ರ ತುಟಿಗಳನ್ನು ಸ್ಪರ್ಶಿಸಿರುವ ನನ್ನ ಈ ತುಟಿಗಳನ್ನು ಶ್ರೀರಾಮಕೃಷ್ಣರ ಪವಿತ್ರವಾದ ಕೈ ಮುಟ್ಟಿ, ಹೇಗೆ ನನಗೆ ತಿನ್ನಿಸಿತು ಎಂಬುದನ್ನು ನಾನು ಈಗ ನೆನಪಿಸಿಕೊಂಡಾಗ ಮನಸ್ಸಿನ ಭಾವನೆ ತುಂಬಿ ಬಂದು, "ಅದು ನಿಜವಾಗಿ ನಡೆಯಿತೆ ಅಥವಾ ಅದೊಂದು ಕನಸೊ?" ಎಂದು ನನಗೆ ನಾನೇ ಕೇಳಿಕೊಳ್ಳುತ್ತೇನೆ. ಶ್ರೀರಾಮಕೃಷ್ಣರ ಭಕ್ತರೊಬ್ಬರಿಂದ ಕೇಳಿದೆ, ಅವರು ತಮ್ಮ ದರ್ಶನವೊಂದರಲ್ಲಿ ನನ್ನನ್ನು ಒಂದು ಮಗುವಿನಂತೆ ಕಂಡರಂತೆ.  ಅವರೊಡನೆ ಇದ್ದಾಗಲೆಲ್ಲ ನಿಜವಾಗಿಯೂ ನಾನು ಒಂದು ಸಣ್ಣ ಮಗುವೆಂದೇ ನನಗೆ ಭಾಸವಾಗುತ್ತಿತ್ತು.

ಶ್ರೀರಾಮಕೃಷ್ಣರನ್ನು ನನ್ನ ಸ್ವಂತದವರೇ ಎಂದು ನಾನು ಕಂಡರೂ, ನನ್ನ ಹಿಂದಿನ ಸಂಸ್ಕಾರಗಳು ಅಷ್ಟು ಸುಲಭವಾಗಿ ಅಳಿದಿರಲಿಲ್ಲ. ಒಂದು ದಿನ ಮದ್ಯದ ಪ್ರಭಾವದಿಂದ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದೆ. ಶ್ರೀರಾಮಕೃಷ್ಣರ ಭಕ್ತರು ಕುಪಿತರಾಗಿ ನನ್ನನ್ನು ಥಳಿಸುವುದರಲ್ಲಿದ್ದರು. ಆದರೆ ಶ್ರೀರಾಮಕೃಷ್ಣರು ಅವರನ್ನು ತಡೆದರು. ಬೈಗುಳದ ಪ್ರವಾಹ ನನ್ನ ತುಟಿಗಳಿಂದ ಅವ್ಯಾಹತವಾಗಿ ಹರಿಯಿತು. ಶ್ರೀರಾಮಕೃಷ್ಣರು ಮೌನವಾಗಿದ್ದರು. ನಂತರ ಮೆಲ್ಲಗೆ ದಕ್ಷಿಣೇಶ್ವರಕ್ಕೆ ಹಿಂತಿರುಗಿದರು. ನನ್ನ ಹೃದಯದಲ್ಲಿ ದುಗುಡವಿರಲಿಲ್ಲ. ಶಿಕ್ಷೆಯ ಭಯವಿಲ್ಲದ ದುಷ್ಟ ಮಗು ತಂದೆಯನ್ನು ಲೆಕ್ಕಿಸದೆ ನಿಂದಿಸುವಂತೆ ನಾನು ಶ್ರೀರಾಮಕೃಷ್ಣರನ್ನು ಅವಮಾನಿಸಿದ್ದೆ. ಕೂಡಲೇ ನನ್ನ ನಡತೆ ಎಲ್ಲರ ಮಾತಿನ ವಿಷಯವಾಯಿತು. ನನ್ನ ತಪ್ಪು ನನಗೆ ಅರಿವಾಗತೊಡಗಿತು. ಆದರೆ ನನ್ನ ಮೇಲೆ ಶ್ರೀರಾಮಕೃಷ್ಣರಿಗಿದ್ದ ಪ್ರೀತಿಯಲ್ಲಿ ನನಗೆ ಎಷ್ಟು ವಿಶ್ವಾಸವಿತ್ತೆಂದರೆ, ಅವರು ಎಂದಾದರೂ ನನ್ನನ್ನು ಕೈಬಿಡಬಹುದೆಂಬ ಭಯ ನನಗೆ ಆಗ ಸ್ವಲ್ಪವೂ ಇರಲಿಲ್ಲ.

ಅನೇಕ ಭಕ್ತರು, ಶ್ರೀರಾಮಕೃಷ್ಣರು ನನ್ನ ದುಷ್ಟತನವನ್ನು ಏಕೆ ಸಹಿಸಿಕೊಳ್ಳುತ್ತಿರುವರು ಎಂದು ಆಲೋಚಿಸಿದರು; ನನ್ನೊಂದಿಗೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದು ಎಂದು ಅವರಿಗೆ ಸಲಹೆ ಇತ್ತರು. ಕೇವಲ ರಾಮಚಂದ್ರ ದತ್ತ  ಮಾತ್ರ  ನನ್ನ ಪರವಾಗಿ ಹೀಗೆ ಬೇಡಿಕೊಂಡನು: "ಮಹಾಶಯರೆ, ಅವನ ಸ್ವಭಾವಕ್ಕೆ ತಕ್ಕಂತೆ, ಅವನು ಬೈಗುಳಿನಿಂದ ನಿಮ್ಮನ್ನು ಪೂಜಿಸಿದ್ದಾನೆ. ಕಾಳಿಂಗಸರ್ಪ ಕೃಷ್ಣನನ್ನು ಕೇಳಿತು, 'ನೀನು ನನಗೆ ವಿಷವನ್ನು ಕೊಟ್ಟಿರುವೆ. ನಾನು ಹೇಗೆ ನಿನಗೆ ಅಮೃತವನ್ನು ಕೊಡಲಿ?' " ಎಂದು. ಶ್ರೀರಾಮಕೃಷ್ಣರು ಭಕ್ತರಿಗೆ ಹೇಳಿದರು, "ರಾಮ ಏನು ಹೇಳುತ್ತಿರುವನು ನೋಡಿ!" ಎಂದು. ಇಷ್ಟಾದರೂ ಭಕ್ತರು ನನ್ನನ್ನು ಹಳಿಯುತ್ತಿದ್ದರು. ಆಗ ಶ್ರೀರಾಮಕೃಷ್ಣರು ಇದ್ದಕ್ಕಿದ್ದಂತೆ, "ಒಂದು ಗಾಡಿ ತೆಗೆದುಕೊಂಡು ಬಾ, ನಾನು ಗಿರೀಶನನ್ನು ನೋಡಲು ಈಗಲೇ ಹೋಗಬೇಕು" ಎಂದರು. ವಿಶ್ವಾಸಭರಿತರಾದ ಆ ನನ್ನ ಆಧ್ಯಾತ್ಮಿಕ ತಂದೆ ನನ್ನ ಮನೆಗೇ ಬಂದು, ಅವರ ಸಾನ್ನಿಧ್ಯ ಮಾತ್ರದಿಂದಲೇ ನನ್ನನ್ನು ಆಶೀರ್ವದಿಸಿದರು.

ದಿನಕಳೆದಂತೆ, ಪ್ರೇಮವೇ ಮೈತಳೆದಂತಿದ್ದ ಮೃದುಸ್ವಭಾವದ ಈ ಪವಿತ್ರಾತ್ಮರೊಡನೆ ನಾನು ನಡೆದುಕೊಂಡ ವಿಷಯದಲ್ಲಿ, ನನಗೆ ಹೆಚ್ಚು ಹೆಚ್ಚು ದುಃಖವಾಗತೊಡಗಿತು. ಅವರನ್ನು ಪೂಜ್ಯದೃಷ್ಟಿಯಿಂದ ನೋಡುತ್ತಿದ್ದ ಇತರ ಭಕ್ತರನ್ನು ಕುರಿತು ಯೋಚಿಸಿದಾಗ ನನ್ನ ಬಗ್ಗೆಯೇ ನನಗೆ ತಿರಸ್ಕಾರ ಉಂಟಾಯಿತು. ಕೆಲವು ದಿನಗಳ ನಂತರ, ನಾನು ಇಂತಹ ಖಿನ್ನ ಮನಃಸ್ಥಿತಿಯಲ್ಲಿದ್ದಾಗ ಶ್ರೀರಾಮಕೃಷ್ಣರು ನನ್ನನ್ನು ನೋಡಲು ಬಂದರು; ಆಗ ಭಾವಮುಖರಾಗಿ ಹೇಳಿದರು, "ಗಿರೀಶ್ ಘೋಷ್, ಚಿಂತಿಸಬೇಡ. ನಿನ್ನಲ್ಲಿ ಆಗುವ ಪರಿವರ್ತನೆಯನ್ನು ನೋಡಿ ಜನ ಅಚ್ಚರಿಪಡುವರು."